ಪ್ರೆಸ್ ಮಾಡಿದರೆ ಆ ಬಿಲ್ಲಿಗೆ ತೊಂದರೆಯಾಗಬಹುದು, ಅದು ಅಫಿಷಿಯಲ್ ಬಿಲ್, ಅದು ಸರ್ಕಾರ ಮಟ್ಟದಿಂದ ಬಂದಿರತಕ್ಕಂತಹ ಮಸೂದೆ, ಇದನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಇದು ಒಂದು ನಿಜವಾದ ವಿಧೇಯಕವಾಗಿದ್ದರೆ ನಮ್ಮದೇನು ಅಭ್ಯಂತರವಿಲ್ಲ. ಹಣಕಾಸಿನ ಮೊತ್ತದಲ್ಲಿ ಸ್ವಲ್ಪ ವ್ಯತ್ಯಾಸಗಳಿದೆ, 1ಲಕ್ಷದಿಂದ 2 ಲಕ್ಷ ರೂಪಾಯಿಗಳವರೆಗೆ ಮಾಡಿ ಎಂದು ಹೇಳಿದ್ದೇನೆ, 1 ಲಕ್ಷ ರೂಗಳು ಹೆಚ್ಚಿಗೆ ಆಗುತ್ತದೆ ಅದನ್ನು ನೀವು ಅಮೆಂಡ್‌ಮೆಂಟ್ ಮಾಡಿ ಮಾಡಬಹುದು. ಆದರೆ ಐ ಥಿಂಕ್ ಅದು ಆಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಸುಬ್ಬಾರೆಡ್ಡಿಯವರು ಫೀ ಕೊಟ್ಟರೆ ಸರಿಯಾಗಿ ಹೇಳುವುದಿಲ್ಲ, ಹಾಗೆಯೆ ಸಲಹೆಯನ್ನು ಕೊಡುತ್ತಾರಲ್ಲವೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಆದ್ದರಿಂದ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ :— ಆಯಿತು.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :— ಒಪ್ಪಿಗೆ ನೀಡಲಾಯಿತು.

(ii) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನು ಪರಭಾರೆ ನಿಷೇಧ) ಕಾಯ್ದೆ (ಮೊದಲನೆಯ ತಿದ್ದುಪಡಿ) ವಿಧೇಯಕ, *2000.*

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನು ಪರಭಾರೆ ನಿಷೇಧ) ಕಾಯ್ದೆ (ಮೊದಲನೆಯ ತಿದ್ದುಪಡಿ) ವಿಧೇಯಕ, 2000 ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ವಿರೋಧಪಕ್ಷದ ನಾಯಕರು ಬಿಲ್‌ನ್ನು ಮೂವ್ ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಫ್ರೀಜರ್ ಇದ್ದರೆ, ಸಂ ಇಲ್ಲದಿದ್ದರೆ ಒಳ್ಳೆಯ ಬಿಲ್ ಇದ್ದರೆ ನಾವೇ ತಂದುಬಿಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಮಂತ್ರಿಗಳು ತಿಳಿದುಕೊಳ್ಳಬೇಕು ಡಾ: ರಾಜ್‌ಕುಮಾರ್‌ರವರ ಅಪಹರಣವಾದ ಸಂದರ್ಭದಲ್ಲಿ, 108 ದಿವಸ ಅಂತಹ ಸಂದರ್ಭದಲ್ಲಿ ನಾವು ಇಂಡಿಯಾದೇಶದ ಇತಿಹಾಸದಲ್ಲಿ ಯಾರೂ ಆ ತರಹ ಸಹಕಾರ ಕೊಟ್ಟಿಲ್ಲ. ವಿರೋಧಪಕ್ಷಗಳವರು ನಿಮಗೆ ಸಹಾಯವನ್ನು ಕೊಟ್ಟಿದ್ದೇವೆ. ಅದು ಒಳ್ಳೆಯ ಸತ್‌ಸಂಪ್ರದಾಯವಲ್ಲವೆ? ಅದೇ ರೀತಿಯಲ್ಲಿ ವಿರೋಧಪಕ್ಷದ ನಾಯಕರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರ ಜಮೀನನ್ನು ಪರಭಾರೆ ಮಾಡುವ ವಿಚಾರದಲ್ಲಿ, ಒಂದು ಬಿಲ್ಲನ್ನು ಮಂಡಿಸಬೇಕೆಂದು ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ. ಮಾನ್ಯ ಅಧ್ಯಕ್ಷರ ಕಾಲದಲ್ಲಿ ಇದು ಆಯಿತೆಂದು ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ತಮಗೂ ಅನೇಕ ವಿಚಾರಗಳಲ್ಲಿ, ಒಪ್ಪಿಗೆಯಾಗುವುದಿಲ್ಲವೆಂದು ಇಟ್ಟುಕೊಳ್ಳಿ, ಒಪ್ಪದಿದ್ದರೆ ಒಳ್ಳೆಯದು. ಚರ್ಚೆ ಮಾಡುವುದಕ್ಕೆ ತಾವು ಏಕೆ ಅಡ್ಡಿಪಡಿಸುತ್ತೀರಾ? ಚರ್ಚೆಯಾಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಚರ್ಚೆಯಾಗುವುದಿಲ್ಲ, ಆ ಸಂಪ್ರದಾಯ ಇಲ್ಲ. ಏಕೆಂದರೆ ನೀವು ತಂದಂತಹ ಬಿಲ್‌ಗೆ ನಾವು ಒಪ್ಪುವುದು ಅಂದರೆ ಅದು ಸರಿಯಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಇಂಟರ್‌ಡ್ಯೂಸ್ ಮಾಡುವುದಕ್ಕೆ ಮೆಜಾರಿಟಿ ವಿಚಾರ ತಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಎರಡನೆಯದು ಇದೊಂದು ಸಂಪ್ರದಾಯವಾಗಬಾರದು.

ಶ್ರೀ ಜಗದೀಶ್‌ಶೆಟ್ಟರ್ :— ಮಂಡನೆ ಮಾಡುವುದಕ್ಕೆ ತಮಗೆ ಕ್ಲೀನ್ಸ್ ಮಾಡುತ್ತೇನೆ. ಒಪ್ಪುವುದು ಬಿಡುವುದು ನಿಮಗೆ ಬಿಟ್ಟಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇದು ಆಗಬೇಕೆನ್ನುವ ಅವರ ಅಭಿಪ್ರಾಯವಿದ್ದರೆ, ಅದು ಒಳ್ಳೆಯದು ಇದ್ದರೆ ಸರ್ಕಾರಕ್ಕೆ ಕಳುಹಿಸಿ, ನಾವು ಪರಿಶೀಲನೆ ಮಾಡಿ ಡೆಫನೆಟ್ಲಿ ಕ್ಲೀಯರ್ ಮಾಡುತ್ತೇವೆ. ಇದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಚರ್ಚೆ ಮಾಡಿ, ಜನರಿಗೆ ಇದರಿಂದ ಸಹಾಯವಾಗುತ್ತದೆಂದರೆ ಖಂಡಿತಾ ಸಹಾಯ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಕ್ವೋರಂನಾನ್ ಸ್ಪೇಜ್‌ನಲ್ಲಿ ಎಕ್ಸ್‌ಪ್ಲೇನ್ ಮಾಡಬಹುದೇ ಹೊರತು ಇಂಪ್ಲಿಮೆಂಟೇಷನ್ ಸ್ಪೇಜ್‌ನಲ್ಲಿ ಎಕ್ಸ್‌ಪ್ಲೇನ್ ಮಾಡುವುದಕ್ಕಾಗುವುದಿಲ್ಲ. ನೀವು ಸರ್ಕಾರಕ್ಕೆ ಕಾಂಪ್ಲಿಮೆಂಟ್ ಕೊಡಿ.

SRI D.B. CHANDREGOWDA :— If you are taking it up for consideration, you are free to do it. I will leave it you.

MR. SPEAKER :— We are not taking it for consideration.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಸಿಂಧ್ಯಾರವರು ನಮಗೆ 108 ದಿವಸ ಸಹಕಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿ ಒಂದು ಸಲ ಅಲ್ಲ, ಎರಡು ಸಲ ಅಲ್ಲ ಮುಖ್ಯಮಂತ್ರಿಗಳು ತಮಗೆ ಧನ್ಯವಾದಗಳನ್ನು ಕೊಟ್ಟಿದ್ದಾರೆ. ಇನ್ನೊಂದು ಸಾರಿ ನಾನು ತಮಗೆ ಧನ್ಯವಾದಗಳನ್ನು ಕೊಡುತ್ತೇನೆ.

ಅಧ್ಯಕ್ಷರು :— ಸರ್ಕಾರದವರು ನಾವೇ ತರುತ್ತೇವೆಂದು ಹೇಳಿದ್ದಾರೆ. ಮತ್ತೆ ಏಕೆ ಎಕ್ಸ್‌ಪ್ಲೇನ್ ಮಾಡುತ್ತೀರಿ?

SRI Mallikharjuna Kharge :— If it is in public interest, we will examine it.

ಶ್ರೀ ಜಗದೀಶ್‌ಶೆಟ್ಟರ್ :— ಹಾಗಾದರೆ ಇದನ್ನು ಪೆಂಡಿಂಗ್‌ನಲ್ಲಿಡಿ.

ಶ್ರೀ ಎಸ್. ಸುರೇಶ್‌ಕುಮಾರ್ :— ಹಾಗಾದರೆ ಈ ಮಸೂದೆಯ ಪರವಾಗಿರುವವರು ಹೌದು ಎನ್ನಬೇಕು ವಿರೋಧವಾಗಿರುವವರು ಇಲ್ಲ ಎಂದು ಹೇಳಬೇಕೆನ್ನುವ ಪದವನ್ನು ಎಕ್ಸ್‌ಪಂಜ್ ಮಾಡುತ್ತೀರಾ?

ಅಧ್ಯಕ್ಷರು :— ನಾನು ಇನ್ನು ಪ್ರೊಸಿಜರ್ ಪ್ರಕಾರ ಪೂರಾ ಮುಗಿಸಿಲ್ಲ. ವಿವರಣೆ ಕೊಡುವುದು ಮತ್ತು ಎಕ್ಸ್‌ಪಂಜ್ ಮಾಡತಕ್ಕ ಪ್ರಶ್ನೆ ಬರುವುದಿಲ್ಲ.

13. ಸಭೆಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೇ ವಿಧಾನಸಭೆಯ ಎರಡನೆಯ ಅಧಿವೇಶನದ ಮುಂದುವರೆದ ಉಪವೇಶನಗಳು ದಿನಾಂಕ 23-10-2000ದಿಂದ 31-10-2000ದವರೆಗೆ ಮತ್ತು ದಿನಾಂಕ 7-11-2000ದಿಂದ 25-11-200ದವರೆಗೆ 20 ದಿನಗಳು ಸಮಾವೇಶಗೊಂಡಿದ್ದು ಒಟ್ಟು 115+7 = 122 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.